ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಅ) ಸರ್ಕಾರದ ಪರಿಶೀಲನೆಯಲ್ಲಿ ಇಲ್ಲ.

ಆ) ಉದ್ಭವಿಸುವುದಿಲ್ಲ.

ರಾಜ್ಯ ಸರ್ಕಾರಿ ನೌಕರರುಗಳಿಗೆ ಸರ್ಕಾರಿ ಆಸ್ಪತ್ರೆ ಸೌಲಭ್ಯ.

65 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಮುಖ್ಯ ಮಂತ್ರಿಗಳ ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸಿವರೆ?

ಅ) ಕರ್ನಾಟಕ ಸರ್ಕಾರದ ಸಚಿವಾಲಯದಲ್ಲಿನ ಕೆಲವು ಅಧಿಕಾರಿ ಸಿಬ್ಬಂದಿಯವರಿಗೆ ಬೆಂಗಳೂರಿನ ಲೈಕ್‌ಸೈಡ್ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯಲು ಅನುಮತಿ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ರೀತಿ ಅನುಮತಿ ಪಡೆದು ಚಿಕಿತ್ಸೆ ಪಡೆದಿರುವರು ಒಟ್ಟು ಸಂಖ್ಯೆ ಎಷ್ಟು?

ಇ) ಸರ್ಕಾರದ ಆದೇಶದಂತೆ ಚಿಕಿತ್ಸೆ ಪಡೆದ ಇವರಿಗೆ ವೈದ್ಯಕೀಯ ಹಣವನ್ನು ಮರುಪಾವತಿ ಮಾಡಲು ವಿಳಂಬವಾಗಿರುವುದಕ್ಕೆ ಕಾರಣಗಳೇನು? ಹಾಗೂ ಯಾವಾಗ ಮಾಡಲಾಗುವುದು?

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಅ) ಹೌದು

ಆ) ಒಂದು ಪ್ರಕರಣ

ಇ) ಈ ಪ್ರಕರಣದಲ್ಲಿ ನಿಯಮಾನುಸಾರ ಮರುಪಾವತಿ ಮಾಡಲು ಕ್ರಮ ಕೈಗೊಳ್ಳಲಾಗಿದೆ.

ಡಿ.ಪಿ.ಎ.ಆರ್ ನೌಕರರಿಗೆ ಖಾಸಗಿ ಆಸ್ಪತ್ರೆ ಸೌಲಭ್ಯ

1074 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಡ್ಡು ಉತ್ತರಿಸುವರೆ?

ಅ) 1991 ರಿಂದ ಬೆಂಗಳೂರಿನ ಲೈಕನೈಡ್ ಆಸ್ಪತ್ರೆಯಲ್ಲಿ ಡಿ.ಪಿ.ಎ.ಆರ್. ಅನುಮತಿಸಿ ಚಿಕಿತ್ಸೆ ನಡೆಸಿದೆಯೇ?

ಇ) ಹಾಗಿದ್ದಲ್ಲಿ ಅಂತಹ ನೌಕರರ ಬಿಲ್ಲುಗಳನ್ನು ಮರುಪಾವತಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಅ) 5 (ವಿವರ ಪಟ್ಟಿಯನ್ನು ಲಗತ್ತಿಸಿದೆ).

ಆ) ಹೌದು

ಇ) 4 ಪ್ರಕರಣಗಳಲ್ಲಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಮರುಪಾವತಿ ನೀಡಿದೆ. ಒಂದು ಪ್ರಕರಣದಲ್ಲಿ ವೈದ್ಯಕೀಯ ಬಿಲ್ಲುಗಳನ್ನು ಒದಗಿಸಿರುವುದಿಲ್ಲ. ಆಡಳಿತ ಇಲಾಖೆಯಿಂದ ಮಾಹಿತಿ ಬಂದ ನಂತರ ಪ್ರರರಣವನ್ನು ಇತ್ಯರ್ಥ ಪಡಿಸಲಾಗುವುದು.

ಅನುಬಂಧ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 1074, ಶ್ರೀ ಟಿ.ಬಿ. ಜಯಚಂದ್ರ, ವಿಧಾನ ಸಭಾ ಸದಸ್ಯರು.

1) ಶ್ರೀ ಬಿ. ಗಂಗಾಧರ್
ಸಹಾಯಕ (ಈಗ ಹಾಲಿ ಹಿರಿಯ ಸಹಾಯಕ)
ಕರ್ನಾಟಕ ಸರ್ಕಾರದ ಸಚಿವಾಲಯ
ಬೆಂಗಳೂರು

2) ಶ್ರೀ ಬಿ. ಕಲ್ಯಾಣ್
ಎ.ಸ.ಪಿ. (ಸಿ.ಎ.ಆರ್)
ಇವರ ಪತ್ನಿ ಶ್ರೀಮತಿ ಪ್ರೇಮಾಬಾಯಿ

3) ಶ್ರೀ ಬಿ. ಬಸವಯ್ಯ
ಅಪರ ಕಾರ್ಮಿಕ ಆಯುಕ್ತರು, ಕಾರ್ಮಿಕ ಇಲಾಖೆ
ಪತ್ನಿ ಶ್ರೀಮತಿ ತ್ರಿಪುರಾಂಬ

4) ಶ್ರೀ ಎ. ಪಾಂಡುರಂಗರಾವ್ (ದಿವಂಗತ)
ಸಾರ್ವಜನಿಕ ಸಂಪರ್ಕ ಅಧಿಕಾರಿ
ಡಿ.ಜಿ.ಮತ್ತು ಐ.ಜಿ.ಪಿ.ರವರ ಕಛೇರಿ

5) ಶ್ರೀ ಹೆಚ್.ಆರ್. ಗಿರೀಶ್
ಎರಡನೇ ದರ್ಜೆ ಸಹಾಯಕ
ಮುಖ್ಯ ಅಭಿಯಂತರವರ ಕಛೇರಿ,
ಸಣ್ಣ ನೀರಾವರಿ ಇಲಾಖೆ

ತುಂಗಭದ್ರ ಎಡದಂಡೆ ಕಾಲುವೆ ನೀರು ಪೂರೈಕೆಯಲ್ಲಿ ತೊಂದರೆ

1095 - ಶ್ರೀ ವಿರೂಪಾಕ್ಷ (ಸಿಂಧನೂರು) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಂಗಭದ್ರಾ ಎಡದಂಡೆ ಕಾಲುವೆಯ ನೀರನ್ನು ವಿಪ್ರಿಲ್ 8ಕ್ಕೆ ಬಂದು ಮಾಡಲು ನಿಗದಿಗೊಳಿಸಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ

ಆ) ವಿಪ್ರಿಲ್ 8ಕ್ಕೆ ನೀರು ನಿಲ್ಲಿಸಿರುವುದರಿಂದ ರೈತರಿಗೆ ಅಪಾರ ಹಾನಿಯಾಗುವ ವಿಷಯ ಸರ್ಕಾರದವರ ಗಮನಕ್ಕೆ ಬಂದಿದೆಯೆ?

ಇ) ಹಾಗಿದ್ದಲ್ಲಿ ರೈತರ ಹಾನಿ ತಪ್ಪಿಸಲು ಸರ್ಕಾರದವರು ಕೈಗೊಳ್ಳಲಿರುವ ಕ್ರಮವೇನು?

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯ ಮಂತ್ರಿಯವರು) :

ಅ) ಹೌದು

ಆ) ನೀರನ್ನು ಮುಂದುವರೆಸಲು ರೈತರಿಂದ ಬೇಡಿಕೆ ಇದೆ.